**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ-330 ರಡಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.**

**ವಿಷಯ:-** ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಸಂಸ್ಥೆಗೆ ದಿನಾಂಕ:22.12.2005 ಹಾಗೂ 28.12.2005 ರಂದು ನಿಯಮಾನುಸಾರ ನೇಮಕಗೊಂಡು, ಕೆಲವರು ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. (ಹಳೆ ಪಿಂಚಣಿ ಅವಧಿಯಲ್ಲಿ) ಇವರು ದಿನಾಂಕ:30.04.2022 ಹಾಗೂ 31.03.2022 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಕೆಲವು ಬಾರಿ ಮನವಿ ಸಲ್ಲಿಸಿದರೂ, ಸದರಿಯವರುಗಳಿಗೆ ಹಳೆ ಪಿಂಚಣಿ ಯೋಜನೆಯಡಿ ಇದುವರೆವಿಗೂ ಪಿಂಚಣಿ ಮಂಜೂರಾತಿ ಆಗದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

*****

**ಉತ್ತರ:-** ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ದಿನಾಂಕ:31.03.2006ರ ಪೂರ್ವದಲ್ಲಿ ನೇಮಕಾತಿ ಹೊಂದಿ, ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಹಳೆಯ ಪಿಂಚಣಿ ಸೌಲಭ್ಯವನ್ನು (OPS) ವಿಸ್ತರಿಸಲು ಕೋರಿ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ, ಆರ್ಥಿಕ ಇಲಾಖೆಯು ನೀಡಿದ ಅಭಿಪ್ರಾಯದಂತೆ ಸರ್ಕಾರದ ಪತ್ರ ಸಂಖ್ಯೆ:ಎಂಇಡಿ 140 ಎಂಪಿಎಸ್ 2019, ದಿನಾಂಕ:11.03.2022 ರಲ್ಲಿ ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ ಇವರಿಗೆ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ.

> "ಸರ್ಕಾರದ ಆದೇಶ ಸಂಖ್ಯೆ:ಆಕುಕ 516 ಎಂಪಿಎಸ್ 2004, ದಿನಾಂಕ:22.01.2005 ರನ್ವಯ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು ಪ್ರಾರಂಭಿಸಿದ ನಂತರ 10 ಜನ ಬೋಧಕ ವರ್ಗದವರು ಸ್ವಾಯತ್ತ ಸಂಸ್ಥೆಗೆ ಖಾಯಂ ಆಗಿ ನೇಮಕಗೊಂಡಿರುತ್ತಾರೆ. ನೇಮಕಾತಿ ಆದೇಶದ ಮೆಮೋರಾಂಡಮ್ ಕಂಡಿಕೆ-3 ರಲ್ಲಿ "He / she would be entitled for contributory pension or contribution PF scheme status" ಎಂಬ ಷರತ್ತು ಇರುತ್ತದೆ. ಇದು ನಿಶ್ಚಿತ ಪಿಂಚಣಿ ಯೋಜನೆಯಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 10 ಮಂದಿ ಖಾಯಂ ಬೋಧಕ ವೈದ್ಯರುಗಳನ್ನು ದಿನಾಂಕ:27.08.2020 ರಿಂದ ಜಾರಿಗೆ ಬರುವಂತೆ ಎನ್.ಪಿ.ಎಸ್. ಯೋಜನೆಗೆ ಒಳಪಡಿಸಲು ನಿರ್ದೇಶಿಸಲಾಗಿದೆ."

ದಿನಾಂಕ:30.04.2022 ಮತ್ತು ದಿನಾಂಕ:31.03.2022 ರಂದು ವಯೋನಿವೃತ್ತಿ ಹೊಂದಿರುವ ಬೋಧಕ ಸಿಬ್ಬಂದಿಯನ್ನು "He/she would be entitled for contributory pension or contribution PF scheme status" ಎಂಬ ಷರತ್ತಿಗೊಳಪಟ್ಟು ನೇಮಕಾತಿ ಮಾಡಿದ್ದರಿಂದ, ಸದರಿಯವರುಗಳ ನೇಮಕಾತಿ ಆದೇಶದಲ್ಲಿದ್ದಂತೆ, ಅವರುಗಳು contributory pension or contribution PF scheme ಸೌಲಭ್ಯಕ್ಕೆ ಮಾತ್ರ ಅರ್ಹರಾಗಿದ್ದು, ಅವರಿಗೆ ಹಳೆಯ ಪಿಂಚಣಿ ಸೌಲಭ್ಯವನ್ನು ನೀಡಲು ಅವಕಾಶವಿರುವುದಿಲ್ಲ.

**ಸಂಖ್ಯೆ:** ಎಂಇಡಿ 321 ಎಂಪಿಎಸ್ 2023

**(ಡಾ: ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.